# ಮುನ್ನುಡಿ

# ಶಿಲುಬೆ ಮತ್ತು ಸಭೆ

*"ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪರಿಶುದ್ಧಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" (ಅಪೊಸ್ತಲರ ಕೃತ್ಯಗಳು 20:28).*

ಪಾಪಕ್ಕಾಗಿ ಪ್ರಾಯಶ್ಚಿತ್ತದ ಹೊಸ ಒಡಂಬಡಿಕೆಯ ತತ್ವದ ಬಗ್ಗೆ ಪರಿಚಿತವುಳ್ಳವರು, "ಶಿಲುಬೆಯಿಲ್ಲದೆ ಕ್ರಿಸ್ತನು, ಕ್ರಿಸ್ತನಿಲ್ಲದ ಶಿಲುಬೆಯಂತೆ ಪಾಪಿಗಳನ್ನು ರಕ್ಷಿಸಲು ಬಲವಿಲ್ಲದವನಾಗಿರುವನು" ಎಂಬುದನ್ನು ಒಪ್ಪಿಕೊಳ್ಳುತ್ತಾರೆ, ಹೀಗಿದ್ದರೂ, ಸುವಾರ್ತೆಯ ಶುಭ ಸಮಾಚಾರವು, ಕ್ರಿಸ್ತನು, ದೇವರ ಅಭಿಷಿಕ್ತನು, ದೇವತ್ವದ ಎರಡನೆಯ ಸದಸ್ಯನು, ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ತನ್ನ ದೈಹಿಕ ಜೀವವನ್ನು ಕೊಟ್ಟನು (1 ಕೊರಿಂಥ 15:3). ಕ್ರಿಸ್ತನು ಶಿಲುಬೆಯಿಲ್ಲದವನಾಗಿರಲಿಲ್ಲ ಮತ್ತು ಶಿಲುಬೆಯು ಕ್ರಿಸ್ತನಿಲ್ಲದ್ದು ಆಗಿರಲಿಲ್ಲ - ಅದರ ಪರಿಣಾಮವಾಗಿ, ಮನುಷ್ಯನು, ಪಾಪಿಯು ನಿರೀಕ್ಷೆ ಇಲ್ಲದವನು ಆಗಿರುವದಿಲ್ಲ!

ಬೈಬಲಿನ ಕಥೆಯ ಹೃದಯವು ಮನುಷ್ಯನಿಗಾಗಿ ಶಿಲುಬೆಯ ಮೇಲೆ ದೇವರ ಕುಮಾರನಿಂದ ಮಾಡಲ್ಪಟ್ಟ ಯಜ್ಞವಾಗಿದೆ. ಹೊಸ ಒಡಂಬಡಿಕೆಯ ಪರದೆಯು ಕಲ್ವಾರಿಯ ರಾಜರಕ್ತದಿಂದ ಕೆಂಪಾದ ಬಣ್ಣ ಬಳಿಯಲ್ಪಟ್ಟಿದೆ. ಹಳೇ ಒಂಬಡಿಕೆಯ ಪುಟಗಳು ಅದರ ಪ್ರವಾದಿಕ ಮುನ್ಸೂಚನೆಗಳೊಂದಿಗೆ, ಮತ್ತು ಹೊಸ ಒಡಂಬಡಿಕೆಯ ಪುಟಗಳು, ಅದರ ಐತಿಹಾಸಿಕ ವಾಸ್ತವಿಕತೆಯೊಂದಿಗೆ, ಕ್ರಿಸ್ತನ ರಕ್ತದಿಂದ ಜಿನುಗುಟ್ಟುತ್ತವೆ. ಯೇಸುವಿನ ಕೊನೆಯ ಮೂರು ದಿನಗಳ ದಾಖಲೆಯು ನಾಲ್ಕು ಸುವಾರ್ತೆಗಳ ಸುಮಾರು ಐದನೆಯ ಭಾಗವನ್ನು ತೆಗೆದುಕೊಂಡಿದೆ ಎಂದು ಹೆನ್ರಿ ಸಿ. ಥಿಯೆಸ್ಸೆನ್ ಲೆಕ್ಕ ಹಾಕಿದ್ದಾರೆ. ಯೇಸುವಿನ ಬಹಿರಂಗ ಸೇವೆಯ ಮೂರುವರೆ ವರ್ಷಗಳು ಆತನ ಮರಣದ ಹಾಗೆ ದೊಡ್ಡ ವಿವರಣೆಯಲ್ಲಿ ಕೊಡಲ್ಪಟ್ಟಿದ್ದರೆ, ಸುವಾರ್ತೆಗಳು 8,400 ಪುಟಗಳ ಉದ್ದದ ಒಂದು ಗ್ರಂಥವಾಗುತ್ತಿತ್ತು.[1] ಆರ್. ಎ. ಟೊರ್ರಿ ಎಂಬವರು ಹೊಸ ಒಡಂಬಡಿಕೆಯಲ್ಲಿ ಪ್ರತಿ 53 ವಚನಗಳಲ್ಲಿ 1 ವಚನವು ಕ್ರಿಸ್ತನ ಮರಣಕ್ಕೆ ಸ್ಪಷ್ಟವಾದ ಉಲ್ಲೇಖವನ್ನು ಕೊಡುತ್ತದೆ ಎಂದು ಅಂದಾಜು ಮಾಡಿದ್ದಾರೆ.[2]

ಜಗತ್ತು ಕಳೆಯಲ್ಪಡುವ ಎಲ್ಲದಕ್ಕೂ ಶಿಲುಬೆಯು ಕೂಡಿಸುವ ಚಿನ್ಹೆಯಾಗಿದೆ.

ಪರಿಶುದ್ಧ ಬರಹಗಳೊಳಗಿಂದ ಶಿಲುಬೆಯು ಹೊರಗೆ ತೆಗೆಯಲ್ಪಟ್ಟರೆ, ಬೈಬಲು ದಟ್ಟವಾದ ಅರಣ್ಯದಲ್ಲಿ ಟೊಳ್ಳಾದ ದಿಮ್ಮಿಯಂತೆ ಇರುತ್ತದೆ, ಪಾಪಕ್ಕಾಗಿ ದೈವಿಯ ಯಜ್ಞದ ಅರ್ಪಣೆ ಮತ್ತು ಸತ್ತವರೊಳಗಿಂದ ಯಜ್ಞವಾದಾತನ ಪುನರುತ್ಥಾನ ಇವುಗಳು ಕೇಂದ್ರವಾಗಿರುವುದು ಜಗತ್ತಿನಲ್ಲಿ ಒಂದೇ ಧರ್ಮದಲ್ಲಿ ಅಂದರೆ ಒಂದೇ ಕ್ರೈಸ್ತತ್ವದಲ್ಲಿ ಮಾತ್ರ.

ಪಾಪದ ಮತ್ತು ಪಾಪಿಗಳ, ಅಪರಾಧದ ಮತ್ತು ದೈವತ್ವವಿಲ್ಲದ, ವಿಭಜನೆಯ ಮತ್ತು ಶ್ರಮೆಯ ಜಗತ್ತಿನಲ್ಲಿ ಶಿಲುಬೆಯು *ರಕ್ಷಣೆಗಾಗಿ ದೇವರ ಶಕ್ತಿಯಾಗಿದೆ,* ಅದು ಜಗತ್ತಿನ ಅಂತಿಮ ಸಮಸ್ಯೆಗೆ ದೈವಿಕ ಪ್ರಾಯಶ್ಚಿತ್ತವಾಗಿದೆ. "ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರವ ನಮಗಾದರೋ ದೇವರ ಶಕ್ತಿಯಾಗಿದೆ" (1 ಕೊರಿಂಥ 1:18) ಎಂದು ಬರೆಯಲ್ಪಟ್ಟಿದೆ. "ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2) ಎಂದೂ ಬರೆಯಲ್ಪಟ್ಟಿದೆ.

ಆತ್ಮಿಕ ಅಪಸ್ವರದ ಕೂಗಿನ ಮಧ್ಯದಲ್ಲಿ, ದೇವರಿಂದ ದೂರ ಹೋಗುವದರ ಹಾಗೂ ದೇವರೊಂದಿಗೆ ಐಕ್ಯತೆಯಿಲ್ಲದಿರುವದರ ಮಧ್ಯದಲ್ಲಿ *ಶಿಲುಬೆಯು ಸಮಾಧಾನದ ಮತ್ತು ಸಂಧಾನದ ದೇವರ ಸಾಧನವಾಗಿರುವದು.* "ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನ ಮಾಡಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು" (ಕೊಲೊಸ್ಸೆ 1:20) ಎಂದು ಪೌಲನು ಬರೆದನು. "ನಿಮ್ಮನ್ನೂ ನಮ್ಮನ್ನೂ ಒಂದುಮಾಡಿದವನಾದ ಆತನೇ ನಮಗೆ ಸಮಾಧಾನ ಕರ್ತೃವಾಗಿದ್ದಾನೆ, ... ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ" ಎಂದು ಎಫೆಸ 2:14-16 ಹೇಳುತ್ತದೆ.

ಆತ್ಮಿಕ ಹಸಿವೆ, ಬಡತನ ಮತ್ತು ನಿರಾಶ್ರೆಯ ಸ್ಥಿತಿ ಹೆಚ್ಚಾಗಿರುವಲ್ಲಿ, *ದೇವರ ವಿಮೋಚನಾ ಒದಗಿಸುವಿಕೆಗಳು*, ನೀತಿಯ ಐಶ್ವರ್ಯಗಳು ಶಿಲುಬೆಯ ಅಡಿಯಲ್ಲಿ ಉಚಿತವಾಗಿ ಕೊಡಲ್ಪಡುವವು, "ಆದರೆ ನಾವು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ಪ್ರಸಂಗಿಸುವೆವು ...." ಎಂದು ಪೌಲನು ಹೇಳಿದನು. ಅವನು ಮುಂದೆ ಹೋಗಿ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನು, "ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು" ಎಂದು ಹೇಳಿದನು (1 ಕೊರಿಂಥ 1:23, 30).

ವಿವಾದವಿಲ್ಲದೇ, ಪರಿಶುದ್ಧಾತ್ಮನು ಕ್ರಿಸ್ತನ ಶಿಲುಬೆಯನ್ನು ಕೇಂದ್ರ ಬಿಂದುವಿನಂತೆ, ಬೈಬಲಿನ ಕೇಂದ್ರ ಸಂದೇಶದಂತೆ ಬಿಂದುದೀಪ ಮಾಡಿದ್ದಾನೆ.

ವಿಮೋಚನೆಯನ್ನು ಕುರಿತ ಇತರ ಎಲ್ಲಾ ಸತ್ಯಗಳೊಂದಿಗೆ ಶಿಲುಬೆಯ ಸಮ್ಮಿಶ್ರತೆಯ ಕಾರಣದಿಂದ, ಒಬ್ಬನು ಸಭೆಯು ಶಿಲುಬೆಯಿಂದ ಒಂದು ಬುಗ್ಗೆಯಿಂದ ಪ್ರವಾಹದಂತೆ, ಸೂರ್ಯನಿಂದ ಗುಣಪಡಿಸುವ ಕಿರಣಗಳಂತೆ ಹರಿಯುವುದೆಂದು ನಿರೀಕ್ಷಿಸುತ್ತಾನೆ. ಹೊಸ ಒಡಂಬಡಿಕೆಯ ಜಾಗರೂಕತೆಯ ಓದುವಿಕೆಯು ಇದು ಹೀಗಿರುವುದು ಎಂಬುದನ್ನು ದೃಢಪಡಿಸುತ್ತದೆ. ಕ್ರಿಸ್ತನಿಲ್ಲದ ಕ್ರೈಸ್ತತ್ವವು ಇರಲಾರದು; ಇಲ್ಲವೇ, ದೇಹವಿಲ್ಲದ ಶಿರಸ್ಸಿನಂತೆ ಶಿರಸ್ಸು ಇಲ್ಲದ ದೇಹದಂತೆ ಸಭೆಯಿಲ್ಲದ ಕ್ರೈಸ್ತತ್ವವೂ ಇರಲಾರದು. ಹೊಸ ಒಡಂಬಡಿಕೆಯ ಆಕರ್ಷಕ ವಿಷಯವು, ಶಿಲುಬೆ ಮತ್ತು ಸಭೆಯು ನಿಕಟವಾಗಿ ಒಂದಕ್ಕೊಂದು ಕೂಡಿಸಲ್ಪಟ್ಟಿವೆ, ತಪ್ಪಿಹೋದ ಮಾನವತೆಗೆ ಕೃಪೆಯ ದೇವರ ಆಳಿಕೆಯಂತೆ ಒಂದು ಯೋಜನೆಯಲ್ಲಿ ಒಂದುಗೂಡಿಸಲ್ಪಟ್ಟಿದೆ ಎಂಬುದಾಗಿದೆ.

ಭೂಲೋಕದ ಎಲ್ಲಾ ಜನಾಂಗಗಳೊಳಗಿಂದ, ಶಿಲುಬೆಯಿಂದ ಒಂದು ನೂತನ ಕುಟುಂಬವನ್ನು - ಕ್ರಿಸ್ತನಲ್ಲಿ ಒಂದು ದೇಹವನ್ನು - ತನ್ನ ಆಯ್ದುಕೊಂಡ ಜನಾಂಗವಾಗಿ ದೇವರು ಕರೆಯುತ್ತಾನೆ.

ಈ ವಿಷಯವನ್ನು ಇನ್ನೂ ಮುಂದುವರಿಸೋಣ: ಸಭೆಯು ಶಿಲುಬೆಗೆ ಹೇಗೆ ಸಂಬಂಧಿಸಿರುತ್ತದೆ? ಶಿಲುಬೆಗೂ ಮತ್ತು ಸಭೆಗೂ ಒಂದಕ್ಕೊಂದು ಯಾವ ಸಂಬಂಧ ವಿರುತ್ತದೆ? ಶಿಲಬೆಯು ಸಭೆಗಾಗಿ ಏನನ್ನು ಮಾಡುತ್ತದೆ?

## ಅದರಿಂದ ಸೃಷ್ಟಿಸಲ್ಪಟ್ಟಿದೆ

ಮೊದಲನೆಯದಾಗಿ, ಶಿಲುಬೆಯು ಸಭೆಯನ್ನು ಸೃಷ್ಟಿಸುತ್ತದೆ. ಪಾಪಗಳ ವಿಮೋಚನೆಯ ಮುಖಾಂತರ ಸಭೆಯು ಉದಯವಾಗುತ್ತದೆ. ಶಿಲುಬೆಯು ಇಲ್ಲದಿದ್ದರೆ, ಸಭೆಯೂ ಇರಲಾರದು.

ಒಬ್ಬ ವ್ಯಕ್ತಿಯು ವಿಧೇಯ ವಿಶ್ವಾಸದಲ್ಲಿ ಕ್ರಿಸ್ತನಿಗೆ ತನ್ನ ರಕ್ಷಕನಂತೆ ಮತ್ತು ದೇವರ ಕುಮಾರನಂತೆ ಉತ್ತರಕೊಡುವಾಗ, ಅವನು ಕ್ರಿಸ್ತನ ರಕ್ತದಲ್ಲಿ ತನ್ನ ಪಾಪಗಳಿಂದ ತೊಳೆಯಲ್ಪಡುತ್ತಾನೆ (ಅಪೊಸ್ತಲರ ಕೃತ್ಯಗಳು 22:16). ಆ ತೊಳೆಯುವಿಕೆಯ ಮುಖಾಂತರ, ಅವನು ವಿಮೋಚಿತರ ಸಮಾಜಕ್ಕೆ, ಹೊಸ ಒಡಂಬಡಿಕೆಯು "ಸಭೆ" ಎಂದು ಕರೆಯುವ ರಕ್ಷಿಸಲ್ಪಟ್ಟವರ ಸಮಾಜಕ್ಕೆ ಕೂಡಿಸಲ್ಪಡುತ್ತಾನೆ. ಈ ಕಾರಣದಿಂದ, ತನ್ನ ರಕ್ತದಿಂದ ಯೇಸುವು ಸಭೆಯನ್ನು ಕೊಂಡುಕೊಳ್ಳುವದರ ಬಗ್ಗೆ ಪೌಲನು ಮಾತಾಡುತ್ತಾನೆ. "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪರಿಶುದ್ಧಾತ್ಮನು ನಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" (ಅಪೊಸ್ತಲರ ಕೃತ್ಯಗಳು 20:28) ಎಂದು ಎಫೆಸದ ಹಿರಿಯರಿಗೆ ಹೇಳಿದನು. ಸ್ಪಷ್ಟವಾಗಿ, ಸಭೆಗಾಗಿ ಶಿಲುಭೆಯ ಮೇಲೆ ಯೇಸುವು ಮರಣಹೊಂದಿದನು, "ಕ್ರಿಸ್ತನು ಸಹ ಸಭೆಯನ್ನು ಪ್ರೀತಿಸಿದನು ಮತ್ತು ಅದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು" (ಎಫೆಸ 5:25) ಎಂದು ಪೌಲನು ಹೇಳಿದನು. ಯೇಸುವಿನ ಮರಣದ ಉದ್ದೇಶವು ಕ್ರಿಸ್ತನೊಂದಿಗೆ ಅನ್ಯೋನ್ಯತೆಯಲ್ಲಿ ಜಗತ್ತಿನಲ್ಲಿ ಜೀವಿಸುವ "ಹೊರಗೆ ಕರೆಯಲ್ಪಟ್ಟ" ಮತ್ತು ಆತನ ಆತ್ಮಿಕ ಕಾರ್ಯಕ್ಕೆ ತಮ್ಮನ್ನು ಕೊಟ್ಟ ಜನರನ್ನು ಒದಗಿಸುವುದಾಗಿರುತ್ತದೆ. ಯೇಸುವು "ನಿಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧ ಮಾಡುವದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು" (ತೀತ 2:14) ಎಂದು ಪೌಲನು ತೀತನಿಗೆ ಹೇಳಿದನು.

ದಕ್ಷಿಣ ಅರ್ಕನ್ಸಾಸದಲ್ಲಿ ಒಂದು ಸುವಾರ್ತಾ ಕೂಟದಲ್ಲಿ ಒಂದು ರಾತ್ರಿ ನಾನು ಪ್ರಸಂಗ ಮಾಡಿದ ನಂತರ ಅಸಾಮಾನ್ಯವಾದ, ಮನಮುಟ್ಟುವ ಕಥೆಯೊಂದಿಗೆ ಒಬ್ಬ ಮಹಿಳೆ ನನ್ನ ಬಳಿಗೆ ಬಂದಳು. ಆಕೆ ನಾಲ್ಕು ವರ್ಷದ ಚಿಕ್ಕ ಬಾಲಕಿಯಾಗಿದ್ದಾಗ, ಟೆಕ್ಸಾಸದ ಡಲ್ಲಾಸದಲ್ಲಿ ವಾಸಿಸುತ್ತಿದ್ದಾಗ ಸಂಭವಿಸಿದ ಒಂದು ಘಟನೆಯ ಬಗ್ಗೆ ಹೇಳಿದಳು. ಆ ಸಮಯದಲ್ಲಿ ಆಕೆಯ ಕುಟುಂಬವು ಅತಿಯಾಗಿ ವಾಹನ ಸಂಚಾರವಿದ್ದ ಹೆದ್ದಾರಿಯ ಬಳಿಯಲ್ಲಿ ವಾಸಿಸುತ್ತಿತ್ತು, ಅವರ ಅಂಗಳವು ಹೊರಗೆ ಆಡಲು ಮಕ್ಕಳಿಗೆ ಚಿಕ್ಕ ಸ್ಥಳವನ್ನು ಒದಗಿಸಿತ್ತು. ಒಂದು ದಿನ ಸಾಯಂಕಾಲ, ಆಕೆ ಮತ್ತು ನೆರೆಯ ಹಲವು ಚಿಕ್ಕ ಮಕ್ಕಳು ಅಂಗಳದಲ್ಲಿ ಚಂಡಿನಾಟ ಆಡುತ್ತಿದ್ದರು. ಆ ಚೆಂಡು ಯಾವ ರೀತಿಯದಾಗಿತ್ತು ಎಂಬುದರ ಜ್ಞಾಪಕವಿಲ್ಲ ಎಂದು ಆಕೆ ಹೇಳಿದಳು, ಆದರೆ ಅದು ಆಕೆಯಿಂದ ಅದು ಪುಟಿದು ಹೆದ್ದಾರಿಯೊಳಗೆ ಉರುಳಿ ಹೋಯಿತು. ಯೋಚನೆ ಮಾಡದೇ, ಆಕೆ ಅದರ

ಹಿಂದೆ ಓಡಿಹೋದಳು. ಅದನ್ನು ಎತ್ತಿಕೊಳ್ಳಲು ಭಾಗುತ್ತಿರುವಂತೆ ಹೆದ್ದಾರಿಯಲ್ಲಿ ವೇಗದಿಂದ ಬರುತ್ತಿದ್ದ ಒಂದು ದೊಡ್ಡ ಟ್ರಕ್‌ನ್ನು ನೋಡಿ ಭಯಾನಕತೆಯಿಂದ ಸ್ಥಂಭೀಭೂತಳಾದಳು. ಆಕೆಯ ಅಣ್ಣ, ಆ ಸಮಯದಲ್ಲಿ ಒಂಭತ್ತು ವರ್ಷ ವಯಸ್ಸಾಗಿದ್ದವನು, ಆಕೆ ಹೆದ್ದಾರಿಯ ಮೇಲೆ ಓಡುತ್ತಿರುವದನ್ನು ನೋಡಿದನು. ಟ್ರಕ್ಕು ಬರುತ್ತಿರುವದನ್ನೂ ನೋಡಿದನು. ಮಿಂಚಿನಂತೆ ಆಕೆಯ ಹಿಂದೆ ಅವನು ಓಡಿದನು, ಸುರಕ್ಷಿತವಾಗಿ ಆಕೆಯನ್ನು ಹಿಂದಿರುಗಿ ತರಲು ಯೋಚಿಸಿದನು. ಅವನು ಟ್ರಕ್ಕಿನ ಎದುರಿಗೆ ಓಡಿದನು. ಆಕೆಯನ್ನು ದಾರಿ ಬಿಟ್ಟು ಆಚೆ ತಳ್ಳಿದನು. ಅವನು ತನ್ನ ಸ್ವಂತ ಜೀವವನ್ನು ಗಂಡಾಂತರಕ್ಕಿಟ್ಟು ಆಕೆಯನ್ನು ಮರಣದಿಂದ ಕಾಪಾಡಿದನು. ಆ ಅಲ್ಪ ಸಮಯವು ತನ್ನ ಚಿಕ್ಕ ತಂಗಿಯನ್ನು ರಕ್ಷಿಸಲು ಆ ಬಾಲಕನಿಗೆ ಸಾಕಾಗಿತ್ತು, ಅದೆ ಅವನಿಗೆ ತನನ್ನು ತಾನು ರಕ್ಷಿಸಿಕೊಳ್ಳಲಿಕ್ಕೆ ಸಾಕಷ್ಟು ಸಮಯವಿರಲಿಲ್ಲ, ಟ್ರಕ್ಕು ಅವನ ಮೇಲೆ ಹಾಯ್ದು ಹೋಗಿ, ಅವನನ್ನು ತಕ್ಷಣವೇ ಕೊಂದು ಹಾಕಿತ್ತು.

ಆ ದುರ್ಘಟನೆಯ ಬಗ್ಗೆ ಬಹಳ ಜ್ಞಾಪಕವಿಲ್ಲ ಎಂದು ಆ ಮಹಿಳೆ ಹೇಳಿದಳು, ಆದರೆ ಜೀವವಿಲ್ಲದ ತನ್ನ ಸಹೋದರನ ದೇಹವು ಹೆದ್ದಾರಿಯ ಮೇಲಿಂದ ಎತ್ತಿಕೊಂಡು ತರಲ್ಪಟ್ಟು ತಮ್ಮ ಮನೆಯ ಮೇಜಿನ ಮೇಲೆ, ಅಂಬುಲೆನ್ಸ್ ಬಂದು ಅದನ್ನು ತೆಗೆದುಕೊಂಡು ಹೋಗುವವರೆ ಇಡಲ್ಪಟ್ಟದ್ದನ್ನು ಆಕೆ ಜ್ಞಾಪಿಸಿಕೊಳ್ಳುತ್ತಾಳೆ. ಆಕೆ ಆಳವಾದ ಅರ್ಥದಿಂದ ಮತ್ತು ಅತಿ ವಿಶೇಷವಾದ ಮೆಚ್ಚಿಕೆಯ ಮಾತುಗಳಿಂದ, "ನನ್ನ ಅಣ್ಣ ನನಗಾಗಿ ಸತ್ತನು" ಎಂದು ಹೇಳಿದಳು. ಆಕೆ ಒಬ್ಬ ನಂಬಿಗಸ್ಥ ಕ್ರೈಸ್ತಳು ಆದರೆ ಸಭೆಯಲ್ಲಿ ಇಂದು ಆಕೆಯ ಜೀವನ ಮತ್ತು ಸೇವೆಗಾಗಿ ಅವಕಾಶವು ಅನೇಕ ವರ್ಷಗಳ ಹಿಂದೆ ಆಕೆಯ ಸಹೋದರನ ತ್ಯಾಗದಿಂದ ಸೃಷ್ಟಿಸಲ್ಪಟ್ಟಿತು.

ಅದೇ ರೀತಿಯ ಆದರೆ ಅದಕ್ಕಿಂತಲೂ ಎಷ್ಟೋ ಆಳವಾದ ರೀತಿಯಲ್ಲಿ, ಸಭೆಯು ಯೇಸುವಿನ ಯಜ್ಞದಿಂದ ಜೀವವನ್ನು ಪಡಕೊಳ್ಳುತ್ತದೆ. ಆತನ ಮರಣವು ಜೀವದಲ್ಲಿ ಪ್ರವೇಶಿಸುವದಕ್ಕೆ ಒಂದು ಅವಕಾಶ ಮಾತ್ರವೇ ಆಗಿರುವದಿಲ್ಲ, ಆದರೆ ಮುಂದುವರಿದ ಜೀವನದ ಮೂಲವೂ ಆಗಿರುತ್ತದೆ; ಆತನ ಮರಣವು ನಮಗೆ ಪ್ರಾಯಶ್ಚಿತ್ತ ಯಜ್ಞವಾಗಿದೆ. ನಮ್ಮ ಹಿಂದಿನ ಪಾಪಗಳಿಗಾಗಿ ಕ್ಷಮಾಪಣೆಯ ಸಾಧನವಾಗಿದೆ, ಯೇಸುವು ಈ ಲೋಕ ದೊಳಗೆ ಬಂದನು, ದೇವ - ಮಾನವನಾಗಿ ನಮ್ಮ ಮಧ್ಯದಲ್ಲಿ ನಡೆದಾಡಿದನು, ಮತ್ತು ತನ್ನ ಮರಣದಿಂದ ತನಗಾಗಿ, "ದೇವರ ಸ್ವಕೀಯ ಪ್ರಜೆಯನ್ನಾಗಿ" ಕಂಡುಕೊಂಡನು (1 ಪೇತ್ರ 2:9). ಸಭೆಯು ಇಟ್ಟಿಗೆ ಮತ್ತು ಗಾರೆಯಿಂದ ಮಾಡಲ್ಪಟ್ಟಿರುವದಲ್ಲಿ; ಅದು ರಕ್ತದಿಂದ ಕೊಳ್ಳಲ್ಪಟ್ಟ ಜನಾಂಗವಾಗಿದೆ.

ಕ್ರಿಸ್ತನ ಯಜ್ಞಕ್ಕೆ ನಾವು ಮೂರು ರೀತಿಯಲ್ಲಿ ಉತ್ತರ ಕೊಡುತ್ತೇವೆ: ಮೊದಲನೆಯದು, ಕ್ರಿಸ್ತನು ಮಾಡಿದ್ದಕ್ಕೆ *ಮೆಚ್ಚಿಕೆಯಿಂದ* ಶಿಲುಬೆಯನ್ನು ಅಪ್ಪಿಕೊಳ್ಳುತ್ತೇವೆ. ಕೃತಜ್ಞತೆಯಿಂದ ವಿಮೋಚಿತರು ಕ್ರಿಸ್ತನ ಕೃಪೆಯ ವರಕ್ಕಾಗಿ ಆನಂದ ಪಡುತ್ತಾರೆ! ಪರಲೋಕದ ಮಹಿಮೆ ಯಿಂದ ಕ್ರಿಸ್ತನು ಐಶ್ವರ್ಯವಂತನಾಗಿದ್ದನು; ಆದಾಗ್ಯೂ ನಮ್ಮ ನಿಮಿತ್ತವಾಗಿ, ಪರಲೋಕ ವನ್ನು ಬಿಡುವದರಿಂದ ಹಾಗೂ ಮನುಷ್ಯನಾಗುವದರಿಂದ ಆತನು ಬಡವನಾದನು; ಆತನ ಬಡತನದಿಂದ ನಾವು ಆತ್ಮೀಕವಾಗಿ ಐಶ್ವರ್ಯವಂತರಾಗಬೇಕೆಂದು ಹಾಗೆ ಮಾಡಿದನು (2 ಕೊರಿಂಥ 8:9). ಎರಡನೆಯದಾಗಿ, ಆತನ ಮರಣವನ್ನು ನಮ್ಮದಾಗಿ ಮಾಡಿಕೊಳ್ಳುವದರಿಂದ ನಾವು ಪ್ರತಿಕ್ರಿಯಿಸತಕ್ಕದ್ದು. ನಿಜವಾದ *ಮೆಚ್ಚಿಕೆಯು* ಯೋಗ್ಯ ವಾದ ಮೆಚ್ಚಿಕೆಯನ್ನು ಪ್ರೇರೇಪಿಸುತ್ತದೆ. ನಂಬಿಕೆ ಮತ್ತು ಕ್ರಿಸ್ತನಿಗೆ ವಿಧೇಯತೆಯಿಂದ, ನಾವು ನಮ್ಮ ಜೀವಿತಗಳಲ್ಲಿ ಆತನ ಮರಣದ ಲಾಭಗಳನ್ನು ನಾವು ಸ್ವೀಕರಿಸುತ್ತೇವೆ (ರೋಮಾಪುರ 6:1-4). ಆತನು ಎಲ್ಲರಿಗಾಗಿ ಮರಣಹೊಂದಿದನು (ಇಬ್ರಿಯ 2:9),

ಆದರೆ ಆತನಿಗೆ ವಿಧೇಯರಾಗುವವರು ಮಾತ್ರವೇ ಆತನ ಮರಣದ ಲಾಭಗಳನ್ನು ಹೊಂದಿಕೊಳ್ಳುತ್ತಾರೆ (ಇಬ್ರಿಯ 5:8, 9). ಮೂರನೆಯದಾಗಿ, ನಾವು ಆತನ *ಯಜ್ಞಕ್ಕೆ ಅತ್ಯಾಸಕ್ತಿಯ ಸೇವೆಯಿಂದ ಉತ್ತರ ಕೊಡಬೇಕು* (1 ಕೊರಿಂಥ 15:58). ನಾವು ಕ್ರಿಸ್ತನಿಗೆ ನಾಲಿಗೆಯಿಂದ ಕಾಲ್ಬೆರಳಿನ ವರೆಗೆ - ದೇಹ, ಪ್ರಾಣ ಮತ್ತು ಆತ್ಮದಿಂದ ಒಳಪಟ್ಟಿದ್ದೇವೆ (1 ಕೊರಿಂಥ 6:19, 20). ಅದರಂತೆ, ಈಗ ಈ ಲೋಕದಲ್ಲಿ ನಮ್ಮ ವ್ಯವಹಾರವು ಆತನು ರೂಪಿಸುವ, ನಿರ್ದೇಶಿಸುವ ಮತ್ತು ಆನಂದಗೊಳ್ಳುವ ಸೇವೆಯನ್ನು ಮಾಡುವದಾಗಿದೆ.

## ಅದರಿಂದ ಶುದ್ಧೀಕರಿಸಲ್ಪಟ್ಟಿದೆ

ಎರಡನೆಯದು, ಶಿಲುಬೆಯು ಸತತವಾಗಿ ಸಭೆಯನ್ನು ಶುದ್ಧೀಕರಿಸುತ್ತದೆ. ದೇವರ ಜನಾಂಗಕ್ಕೆ ಮತ್ತು ಅದರ ಮುಖಾಂತರ ಅದರ ಶುದ್ಧೀಕರಿಸುವ ಶಕ್ತಿಯು ಅನುದಿನವೂ ಹರಿಯುತ್ತದೆ. ನಮ್ಮ ಭೌತಿಕ ದೇಹಗಳ ರಕ್ತವು ನಮ್ಮನ್ನು ಬಲಪಡಿಸುತ್ತ ಮತ್ತು ಶುದ್ಧೀಕರಿಸುತ್ತ ನಿಶ್ಚಯವಾಗಿ ಚಲಿಸುವಂತೆ, ಯೇಸುವಿನ ಅಮೂಲ್ಯ ರಕ್ತವು ಜೀವ ಕಾಪಾಡುವ ಬಲದೊಂದಿಗೆ ಆತನ ಜನರೊಳಗೆ ಹರಿಯುತ್ತದೆ.

ನಾವು *ರಕ್ಷಿಸಲ್ಪಡುವ* ಅವಶ್ಯಕತೆಯು ಇರವುದು ಮಾತ್ರವೇ ಅಲ್ಲ, ಆದರೆ *ರಕ್ಷಿಸಲ್ಪಟ್ಟವರಾಗಿ* ಇರುವ ಅಗತ್ಯತೆಯೂ ಇರುತ್ತದೆ. ಒಬ್ಬ ಪಾಪಿಯು, ಕ್ರಿಸ್ತನ ಸುವಾರ್ತೆಗೆ ತನ್ನ ವಿಧೇಯತೆಯ ಮುಖಾಂತರ, ಆತನ ರಕ್ತದಲ್ಲಿ ತೊಳೆಯಲ್ಪಡುವಾಗ, ಮತ್ತು ದೈವಿಕ ಕೃಪೆಯಿಂದ ಕ್ರಿಸ್ತನಲ್ಲಿ ಇಡಲ್ಪಟ್ಟಾಗ, ಸಭೆಯು ಸೃಷ್ಟಿಸಲ್ಪಡುತ್ತದೆ. ಕ್ರೈಸ್ತನ ಬೆಳಕಿನಲ್ಲಿ ಪ್ರತೀದಿನ ನಡೆಯುವಾಗ ರಕ್ತದಿಂದ ಸತತವೂ ಶುದ್ಧೀಕರಿಸಲ್ಪಡುತ್ತಾನೆ. "ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. ಮತ್ತು ಆತನ ಕುಮಾರನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ" (1 ಯೋಹಾನ 1:7). ಯೋಹಾನನು "ಶುದ್ಧಿಮಾಡುತ್ತದೆ" ಎಂಬುದನ್ನು ಗ್ರೀಕ್ ಭಾಷೆಯಲ್ಲಿ ವರ್ತಮಾನ ಕಾಲದಲ್ಲಿ ಇಟ್ಟಿದ್ದಾನೆ. ಒಂದು ಸತತವಾದ, ನಿರ್ದಿಷ್ಟವಾಗಿ ಇರುವ, ಶುದ್ಧೀಕರಿಸುವ ಇಂದಿನ ಕಾರ್ಯವಾಗಿರುವದನ್ನು ಸೂಚಿಸುತ್ತದೆ.

---

*ಶಿಲುಬೆಯು ಇಲ್ಲದಿದ್ದರೆ,*
*ಸಭೆಯೂ ಇರುತ್ತಿರಲಿಲ್ಲ.*

---

ಕ್ರೈಸ್ತನು ಪ್ರತಿದಿನ ಕಡಿಮೆ ಪಾಪಮಾಡಲು ಹುಡುಕುತ್ತ, ಕ್ರಿಸ್ತನಲ್ಲಿ ಬೆಳೆದರೂ ಅವನು ಪರಿಪೂರ್ಣ ವ್ಯಕ್ತಿಯಾಗಿರಲಾರನು. *ಅವನು ತಪ್ಪಿಲ್ಲದವನಾಗಿರುವದಿಲ್ಲ,* ಆದರೆ *ಅವನು ದೋಷವಿಲ್ಲದವನಾಗಿರಬೇಕು.* ಪಾಪಿಯ ಜೀವನದಲ್ಲಿ ಪಾಪದ ಇರುವಿಕೆಯು ಕ್ರಿಸ್ತನ ರಕ್ತದ ಮುಖಾಂತರ ರಕ್ಷಣೆಯ ಅಗತ್ಯತೆಯನ್ನುಂಟು ಮಾಡುತ್ತದೆ ಮತ್ತು ದೇವ ಭಕ್ತರ ಜೀವಿತದಲ್ಲಿಯ ಪಾಪವು ಅವನು ಇಲ್ಲವೇ ಅವಳು ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟವನಾಗಿರಬೇಕು. ಈ ಜಗತ್ತಿನಲ್ಲಿ ಕ್ಷಮಾಪಣೆಗಾಗಿ ನಮ್ಮ ಅಗತ್ಯತೆಯು ಎಂದಿಗೂ ಮುರಿದು ಹೋಗುವದಿಲ್ಲ.

ನಮ್ಮ ಮಕ್ಕಳು ಚಿಕ್ಕವರಿದ್ದಾಗ ಅವರು ತಮ್ಮ ಬೈಸಿಕಲ್ಲುಗಳನ್ನು ಓಡಿಸುವದನ್ನು

ಕಲಿಯುವದನ್ನು ಗಮನಿಸುವುದು ಕುತೂಹಲಕಾರಿಯಾದದ್ದಾಗಿರುತ್ತದೇ. ಈ ಹೊಸ ಕಲೆಯನ್ನು ಹೊಂದಿಕೊಳ್ಳುವಲ್ಲಿ ಅವರು ಎರಡು ಪ್ರಾಥಮಿಕ ಸಮಸ್ಯೆಗಳನ್ನು ಎದುರಿಸಿದರು: ಬೈಸಿಕಲ್ಲನ್ನು ಎಬ್ಬಿಸುವುದು ಮತ್ತು ಅದನ್ನು ನಿಲ್ಲಿಸುವುದು. "ನೀವು ಪೆಡಲನ್ನು ಹಾಕುತ್ತಲೇ ಬೈಕಿನಿಂದ ಮುಂದೆ ಹೋಗುವುದು ಇಲ್ಲವೇ ಬಿದ್ದುಹೋಗುವುದು" ಎಂದು ಒಂದು ಮಗುವು ಹೇಳಿದಂತಿದೆ. ಮೊದಲನೆಯ ಕೆಲಸ ಅವರಿಗೆ ಸುಲಭವಾಗಿರುತ್ತದೆ. ಅದು ಸೀಟಿನ ಮೇಲೇರುವುದು, ಪೆಡಲಿನ ಮೇಲೆ ಕಾಲಿಡುವುದು, ಮತ್ತು ತಕ್ಷಣವೇ ಮುಂದೂಡಿಕೊಂಡು ಹೋಗುವುದು, ಎರಡನೆಯ ಕಾರ್ಯವು ಭಯಪಡಿಸುವ ಭಾಗ. ಬೈಸಿಕಲ್ ನೇರವಾಗಿರುವದಕ್ಕಾಗಿ ಸಾಕಷ್ಟು ವೇಗದಿಂದ ಚಲಿಸಲ್ಪಡುವುದು. ಈ ಎರಡನೆಯ ಕಾರ್ಯದಲ್ಲಿ ಸೋತುಹೋಗುವುದು ನೆಲಕ್ಕೆ ಬೀಳುವಲ್ಲಿ ಪರಿಣಾಮಕೊಳ್ಳವುದು ಮತ್ತು ಸವಾರನು ಗಾಯಗೊಳ್ಳಬಹುದು.

ಬೈಸಿಕಲ್‌ನ್ನು ಸವಾರಿ ಮಾಡಲು ಕಲಿಯುವಂತೆ, ರಕ್ಷಣೆಯು ಎರಡು ಆಯಾಮಗಳನ್ನು ಒಳಗೊಂಡಿರುವಂತೆ ದೃಷ್ಟಿಸಲ್ಪಡಬಹುದು: ಪಾಪಿಯು ಮೊದಲು ದೇವರೊಂದಿಗೆ ಸರಿಪಡಿಸಿಕೊಳ್ಳತಕ್ಕದ್ದು ಮತ್ತು ಆಮೇಲೆ ದೇವರೊಂದಿಗೆ *ಸರಿಯಾಗಿ ಇರತಕ್ಕದ್ದು.* ಸರಿಯಾಗುವುದು ಅಗತ್ಯವಾದದ್ದಾಗಿದೆ, ಆದರೆ ಅದು ಪ್ರಾರಂಭ ಮಾತ್ರ ಆಗಿರುತ್ತದೆ. ಮೊದಲನೆಯದಾಗಿ ಅವನನ್ನು ಪಾಪಿಯನ್ನಾಗಿ ಮಾಡಿದ ಅದೇ ಸಮಸ್ಯೆಯು - ಅವನ ಜೀವನದಲ್ಲಿಯ ಪಾಪದ ಕಲೆಯು - ಅವನು ಸತತವಾಗಿ ಶುದ್ಧೀಕರಿಸಲ್ಪಡದಿದ್ದರೆ, ಅವನು ಕ್ರೈಸ್ತನಾದ ಮೇಲೆಯು ಅವನನ್ನು ಖಂಡಿಸುವ ಸಮಸ್ಯೆಯಾಗುತ್ತದೆ (ಅಪೊಸ್ತಲರ ಕೃತ್ಯಗಳು 8:22). ಅವನು ಕ್ರೈಸ್ತನಾಗುವ ಮೊದಲು ತನ್ನ ಪಾಪಗಳಿಂದ ರಕ್ಷಿಸಲ್ಪಡುವ ಅಗತ್ಯತೆಯುಳ್ಳವನಾದರೆ, ಅವನು ಕ್ರೈಸ್ತನಾದ ಮೇಲೆಯೂ ತನ್ನ ಪಾಪಗಳಿಂದ ರಕ್ಷಣೆಯ ಅಗತ್ಯತೆಯುಳ್ಳವನಾಗಿರುವನಲ್ಲವೇ?

ಕ್ರೈಸ್ತನು "ಬೆಳಕಿನಲ್ಲಿ ನೆಡೆಯುವ" ವರೆಗೆ ರಕ್ಷಿಸಲ್ಪಟ್ಟವನಾಗಿ ಉಳಿಯುವನು. ಅಪೊಸ್ತಲನಾದ ಯೋಹಾನನ ಪ್ರಕಾರವಾಗಿ, ಬೆಳಕಿನಲ್ಲಿ ನಡೆಯುವುದು ಎರಡು ಆತ್ಮಿಕ ಗುಣಲಕ್ಷಣಗಳನ್ನು ಒಳಗೊಂಡಿರುವುದು, ಅದು *ರಕ್ಷಣೆಗಾಗಿ ಯೇಸುವನ್ನು ನಂಬುವದರಿಂದ* ಪ್ರಾರಂಭವಾಗುವುದು: "ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2). ಸ್ಪಷ್ಟವಾಗಿ, ನಾವು ರಕ್ಷಣೆಯನ್ನು ಸಂಪಾದಿಸಿಕೊಳ್ಳಲಾರೆವು (ಎಫೆಸ 2:8, 9). ನಾವು ನಂಬಿಕೆಯಲ್ಲಿಯೂ ವಿಧೇಯತೆಯಲ್ಲಿಯೂ ಆತನಿಗೆ ನಾವು ಉತ್ತರಕೊಟ್ಟರೆ, ಯೇಸುವು ನಮ್ಮನ್ನು ರಕ್ಷಿಸುವೆನೆಂದು ಹೇಳಿದ್ದಾನೆ. ಆತನು ಮಾಡುವೆನೆಂದು ಹೇಳಿದ್ದನ್ನು ಮಾಡುವನೆಂದು ನಾವು ಆತನಲ್ಲಿ ನಂಬತಕ್ಕದ್ದು. ನೋಡುವದರಿಂದಲ್ಲ, ಆದರೆ ನಂಬಿಕೆಯಿಂದ ನಡೆಯಿರಿ (2 ಕೊರಿಂಥ 5:7).

ಬೆಳಕಿನಲ್ಲಿ ನಡೆಯುವುದು ಆತನ ಚಿತ್ತವನ್ನು ಪ್ರಾಮಾಣಿಕತೆಯಿಂದ ಮಾಡುವದನ್ನು ಕೇಳುತ್ತದೆ. "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ ..." (1 ಯೋಹಾನ 5:3); "ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ; ಯಾವನಾದರೂ ದೇವರ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ" (1 ಯೋಹಾನ 2:4, 5). ಆದುದರಿಂದ, ಬೆಳಕಿನಲ್ಲಿ ನಡೆಯುವುದು, ನಮ್ಮ ಪಾಪಭರಿತತೆಯನ್ನು ಒಪ್ಪಿಕೊಳ್ಳುವುದೆಂದು (1 ಯೋಹಾನ 1:8, 10), ದೇವರ ಮುಂದೆ ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವುದು (1 ಯೋಹನ 1:9),

ಮತ್ತು ನಮ್ಮ ಸಾಮರ್ಥ್ಯದೊಂದಿಗೆ ಅನುಗುಣವಾಗಿ ನಮ್ಮ ಪಾಪಗಳನ್ನು ತಿದ್ದುಪಡಿ ಮಾಡಿಕೊಳ್ಳುವುದು (1 ಯೋಹಾನ 2:29) ಎಂದು ಅರ್ಥವಾಗುತ್ತದೆ. ಇದಲ್ಲದೆ ಅದು ಆತನು ನಡೆದಂತೆ ನಡೆಯುವುದು (1 ಯೋಹನ 2:6) ಮತ್ತು ದೇವರಿಂದ ಪ್ರೇರಿತ ವಾದ ಪ್ರಕಟಣೆಯನ್ನು, ಪರಿಶುದ್ಧ ಬರಹಗಳನ್ನು ಯಥಾರ್ಥವಾಗಿ ಅನುಸರಿಸುವುದು ಎಂದರ್ಥವಾಗುತ್ತದೆ (2 ತಿಮೊಥೆ 3:16).

## ಅದರಿಂದ ಒತ್ತಾಯಿಸಲ್ಪಟ್ಟಿದೆ

ಮೂರನೆಯದು, ಶಿಲುಬೆಯು ಸಭೆಯನ್ನು ಒತ್ತಾಯಪಡಿಸುತ್ತದೆ ಮತ್ತು ಚುರುಕುಗೊಳಿಸುತ್ತದೆ. ನಾವಿರಬೇಕೆಂದು ಕ್ರಿಸ್ತನು ಬಯಸುವ ವ್ಯಕ್ತಿಗಳಾಗಿರಲು ಮತ್ತು ನಾವು ಮಾಡಬೇಕೆಂದು ಆತನು ಬಯಸುವ ಕಾರ್ಯವನ್ನು ಮಾಡಲು ಅದು ನಮ್ಮ ಹೃದಯಗಳಲ್ಲಿ ಆತ್ಮಿಕ ಪ್ರೇರಣೆಯನ್ನು ಹುಟ್ಟಿಸುತ್ತದೆ.

ಕ್ರೈಸ್ತರು ನಿರಂತರವಾದ ಶುದ್ಧೀಕರಣವನ್ನು ಮಾತ್ರವಲ್ಲದೆ ಆಂತರ್ಯದ ಪ್ರೇರೇಪಣೆಯನ್ನು ಮತ್ತು ಅದರಂತೆ ವೈಯಕ್ತಿಕ ಬಲವನ್ನು ಹೊಂದಿಕೊಳ್ಳುವ ಅಗತ್ಯತೆ ಯುಳ್ಳವರಾಗಿರುತ್ತಾರೆ. ಕ್ರೈಸ್ತತ್ವವು ಅನೇಕ ಉದಾತ್ತ ಧ್ಯೇಯಗಳನ್ನು ಒದಗಿಸುತ್ತದೆ; ದೇವರ ಕೃಪೆಯು ಬಹುಶಃ ಅತೀದೊಡ್ಡದೂ ಬಹಳವಾಗಿ ಸ್ಥಿರವಾದದ್ದೂ ಆಗಿರುತ್ತದೆ. ಶಿಲುಬೆಯು ನಿಯಂತ್ರಿಸುತ್ತದೆ ಮತ್ತು ಒತ್ತಾಯ ಮಾಡುತ್ತದೆ. "ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" (ಯೋಹಾನ 12:32) ಎಂದು ಯೇಸು ಹೇಳಿದನು. "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ; ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿಶ್ಚಯಿಸಿಕೊಂಡೆವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸ ಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು" (2 ಕೊರಿಂಥ 5:14, 15) ಎಂದು ಪೌಲನು ಬರೆದನು.

ಶಿಲುಬೆಯು ದೇವರಿಗಾಗಿ ಮತ್ತು ಒಬ್ಬರಿಗೊಬ್ಬರಿಗಾಗಿ ಹೆಚ್ಚು ದೊಡ್ಡ ಪ್ರೀತಿ ಗಾಗಿ ನಮ್ಮನ್ನು *ಪ್ರೇರೇಪಿಸುತ್ತದೆ.* "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19) ಎಂದು ಯೋಹಾನನು ಬರೆದನು. ನಾವು ಅನುದಿನವೂ ನಮಗಿರುವ ಪ್ರೀತಿಯನ್ನು ಧ್ಯಾನಮಾಡುವಂತೆ, ನಾವು ಹೆಚ್ಚು ಆಳವಾಗಿ ಆತನನ್ನು ಪ್ರೀತಿಸಲು ಎಳೆಯಲ್ಪಡುವೆವು. "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟಿದ್ದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋ ದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ" (1 ಯೋಹಾನ 3:16) ಎಂದೂ ಯೋಹಾನನು ಬರೆದನು, ಯೇಸುವಿನ ಜೀವನದ ಯಾವುದೇ ಪುನರಾವಲೋ ಕನೆಯು, ನಮಗಾಗಿರುವ ಆತನ ಪ್ರೀತಿಯ ಆಳದ ಮತ್ತು ನಿಶ್ಚಿತತೆಯ ನೂತನ ಹಾಗೂ ಮನಕದಲಿಸುವ ಚಿತ್ರಗಳನ್ನು ಉತ್ಪಾದಿಸುವುದು. ಈ ರೂಪಗಳ ಚಿಂತನೆಯು ನಮ್ಮಲ್ಲಿ ಯೇಸುವಿಗಾಗಿ ಮತ್ತು ಒಬ್ಬರಿಗೊಬ್ಬರಿಗಾಗಿ ಅದೇ ರೀತಿಯ ಪ್ರೀತಿಯನ್ನು ಹುಟ್ಟಿಸುವುದು: "ನಾವೆಲ್ಲರು ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (2 ಕೊರಿಂಥ 3:18).

ಶಿಲುಬೆಯು ನಮ್ಮೊಳಗೆ ಪಾಪಕ್ಕಾಗಿ ತಿರಸ್ಕಾರಪಡುವದನ್ನೂ ಅಸಹ್ಯಿಸುವದನ್ನೂ ತುಂಬಿಸುತ್ತದೆ. ದುಷ್ಟತ್ವಕ್ಕೆ ಮತ್ತು ಪಾಪದ ನಾಶನಕ್ಕೆ ವಾಕ್ಚಾತುರ್ಯದ ಸಾಕ್ಷಿಗಳು

ಕಲ್ವಾರಿಯ ಶಿಲುಬೆ ಮತ್ತು ನಿತ್ಯನಾಶನದ ತಳವಿಲ್ಲದ ತಗ್ಗು ಆಗಿರುತ್ತವೆ. ಶಿಲುಬೆಗಾಗಿ ಮತ್ತು ನರಕದ ಅಗತ್ಯತೆಗಾಗಿ ಕಾರಣಗಳನ್ನು ಅರ್ಥಮಾಡಿಕೊಳ್ಳುವ ಯಾವನೂ ಪಾಪಮಾಡುವದಕ್ಕೆ ಯಾವುದೇ ಅರ್ಹತೆ ಇರುವುದೆಂದು ವಾದಮಾಡುವದಿಲ್ಲ. ದೇವರ ಮಗುವು ತನ್ನ ವಿಮೋಚನೆಯು ಯೆರೂಸಲೇಮಿನ ಹೊರಗೆ ಶಿಲುಬೆಯ ಮೇಲೆ ದೇವರ ಕುಮಾರನ ಭಯಂಕರವಾದ ಮರಣದಿಂದ ತರಲ್ಪಟ್ಟಿತು ಎಂಬುದನ್ನು ಎಂದೂ ಮರೆಯುವದಿಲ್ಲ. ಸರ್ವಶಕ್ತನಾದ ದೇವರು ತನ್ನ ಕುಮಾರನ ಯಜ್ಞದಿಂದ ಮಾತ್ರವೇ ಪಾಪಕ್ಕಾಗಿ ಪ್ರಾಯಶ್ಚಿತ್ತವನ್ನು ಒದಗಿಸಬಲ್ಲನು. ಬೆಲೆಯುಳ್ಳ ಫಲನೆಯು ಪ್ರತಿಯೊಬ್ಬ ಪ್ರಜ್ಞೆಯುಳ್ಳ ವ್ಯಕ್ತಿಯನ್ನು ಪಾಪವನ್ನು ಅಸಹ್ಯಿಸಲು ಮತ್ತು ಅದನ್ನು ತಿರಸ್ಕರಿಸಲು ಒತ್ತಾಯ ಪಡಿಸುವುದು.

ಶಿಲುಬೆಯು *ಯಾವ* ಹಿಂಜರಿಯುವಿಕೆಯೂ ಇಲ್ಲದೇ ನಮ್ಮನ್ನು ಕ್ರಿಸ್ತನ ಸೇವಾ ಕಾರ್ಯಕ್ಕೆ ನಮ್ಮನ್ನು ಕೊಡಲು ಪ್ರಬೋಧಿಸುತ್ತದೆ. ಅದು ಪ್ರೋತ್ಸಾಹಗಳನ್ನೂ ಪ್ರೇರೇಪಣೆಯನ್ನೂ ಮತ್ತು ಆಯಾಸಗೊಳ್ಳದ ಸೇವೆಗಾಗಿ ಬಲವನ್ನೂ ಒದಗಿಸ್ತುದೆ. “ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ” (ರೋಮಾಪುರ 1:14) ಎಂದು ಪೌಲನು ಬರೆದನು. “ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ. ನನಗುಂಟಾದ ಆತನ ಕೃಪೆಯು ನಿಷ್ಫಲವಾಗಲಿಲ್ಲ; ನಾನು ಅವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸ ಪಟ್ಟೆನು. ಆದರೆ ಪ್ರಯಾಸ ಪಟ್ಟವನು ನಾನಲ್ಲ, ನನ್ನೊಂದಿಗಿರುವ ದೇವರ ಕೃಪೆಯೇ” (1 ಕೊರಿಂಥ 15:10) ಎಂದೂ ಅವನು ಹೇಳಿದ್ದಾನೆ. ತನಗಾಗಿ ಶಿಲುಬೆಯ ಮೇಲೆ ದೇವರು ಮಾಡಿದ್ದನ್ನು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳುವ ಮತ್ತು ಮೆಚ್ಚಿಕೊಳ್ಳುವ ಕ್ರೈಸ್ತನಿಗಿಂತ ಹೆಚ್ಚಾಗಿ ಬೇರೆ ಯಾವ ಕ್ರೈಸ್ತನೂ ಕ್ರಿಸ್ತನ ಕಾರ್ಯವನ್ನು ಮಾಡುವದಕ್ಕಾಗಿ ಪ್ರೇರೇಪಿಸಲ್ಪಡಲಾರನು.

ಹೃದಯವಿಲ್ಲದ ಮನುಷ್ಯನೊಂದಿಗೆ ಮದುವೆಯಾದ ಒಬ್ಬ ಮಹಿಳೆಯ ಒಂದು ಹಳೇ ಕಥೆಯಿರುತ್ತದೆ. ಮದುವೆಗೆ ತನ್ನ ಒಪ್ಪಿಸಿಕೊಡುವಿಕೆಯ ನಿಮಿತ್ತವಾಗಿ ತನ್ನ ಬಗ್ಗೆ ಗಮನ ಕೊಡದ ಸಂಗತಿಗೆ ಉತ್ತಮವಾದ ಹೆಂಡತಿಯಾಗಿರಲು ನಿರ್ಧರಿಸಿಕೊಂಡಳು. ಆಕೆ ಅವನಿಗಾಗಿ ಊಟ ಸಿದ್ಧಪಡಿಸಿದಳು, ಅವನ ಬಟ್ಟೆಗಳನ್ನು ತೊಳೆಯುವಳು, ಅವನ ಮನೆಯನ್ನು ಚೆನ್ನಾಗಿ ಇಟ್ಟಳು. ಒಬ್ಬ ಹೆಂಡತಿ ಮಾಡಬೇಕಾದ ಪ್ರತಿಯೊಂದನ್ನೂ ಮಾಡಿದಳು, ಆದರೆ ಆಕೆ ಅವುಗಳಲ್ಲಿ ಯಾವುದರಲ್ಲಿಯೂ ಸಂತೋಷಪಡಲಿಲ್ಲ. ಆಕೆಯ ಜೀವಿತವು ಯಾವುದೇ ಪ್ರತಿಫಲ ಹಾಗೂ ಆನಂದ ಇಲ್ಲದೇ ಗಾಣದೆತ್ತಿನ ಪ್ರಯಾಸಕರವಾದ ಕೆಲಸದಂತೆ ಇತ್ತು. ಕಾಲಾನಂತರದಲ್ಲಿ, ಆಕೆಯ ಗಂಡನು ಸತ್ತು ಹೋದನು. ಮತ್ತು ಸಮಯ ದಾಟಿದ ನಂತರ, ಆಕೆ ಪುನಃ ವಿವಾಹವಾದಳು. ಆಕೆಯ ಎರಡನೆಯ ಗಂಡನು ಮೊದಲನೆಯ ಗಂಡನಿಗಿಂತ ತದ್ವಿರುದ್ಧವಾಗಿದ್ದನು. ಅವನು ಪ್ರೀತಿಸುವವನೂ, ಮೆಚ್ಚಿಕೊಳ್ಳುವವನೂ ಮತ್ತು ಪ್ರೋತ್ಸಾಹಿಸುವವನೂ ಆಗಿದ್ದನು. ಆಕೆ ತನ್ನ ತೀರಿಹೋದ ಗಂಡನೊಂದಿಗೆ ಇದ್ದ ಹಾಗೆಯೇ ಇವನೊಂದಿಗೂ ಇದ್ದಳು, ಆದರೆ ಒಂದು ದೊಡ್ಡ ಭಿನ್ನತೆ ಇತ್ತು - ಅದರ ಪ್ರತಿಯೊಂದು ನಿಮಿಷವನ್ನೂ ಆಕೆ ಪ್ರೀತಿಸಿದಳು. ತನ್ನ ಮೊದಲನೆಯ ಮದುವೆಯಲ್ಲಿ *ಕರ್ತವ್ಯದ ನಿಮಿತ್ತ* ಒಬ್ಬ ಒಳ್ಳೆಯ ಹೆಂಡತಿಯಾಗಿದ್ದಳು, ಆದರೆ ತನ್ನ ಎರಡನೆಯ ಮದುವೆಯಲ್ಲಿ *ಆನಂದ ತುಂಬಿದವಳಾಗಿ* ಆಕೆ ಒಳ್ಳೆಯ ಹೆಂಡತಿಯಾಗಿದ್ದಳು. ಪ್ರೀತಿಯು ಎಂಥಾ ಭಿನ್ನತೆಯನ್ನು ಮಾಡುತ್ತದಲ್ಲವೇ!

ಕ್ರಿಸ್ತನ ಸಭೆಯು ತನ್ನ ಕರ್ತನ ಆಜ್ಞೆಗಳನ್ನು ಜಾಗರೂಕತೆಯಿಂದ ಕೈಕೊಳ್ಳುತ್ತದೆ.

ಅದು ಆತನ ಅಪೇಕ್ಷೆಗಳನ್ನು ಮಾಡುತ್ತದೆ ಮತ್ತು ಆತನ ಯೋಜನೆಗಳನ್ನು ನೆರವೇರಿಸುತ್ತದೆ. ಆದರೆ ಅದು ಪ್ರೀತಿಯ ಒತ್ತಡದಿಂದ ಹಾಗೂ ಆತನ ಕೃಪೆಯ ಆಂತರಿಕ ಪ್ರೇರಣೆಯಿಂದ ವಿಧೇಯ ಜೀವಿತವನ್ನು ಭಾರವಾಗಿ ಕಂಡುಕೊಳ್ಳುವದಿಲ್ಲ. "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳು ಭಾರವಾದವುಗಳಲ್ಲ" (1 ಯೋಹಾನ 5:3).

ನಮಗಾಗಿ ಕ್ರಿಸ್ತನು ಮಾಡಿದ್ದನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳೋಣ. ಆತನ ಯಜ್ಞವನ್ನು ಪ್ರತೀದಿನ ನಮ್ಮದನ್ನಾಗಿ ಮಾಡಿಕೊಳ್ಳೋಣ. ಆತನ ಕೃಪೆಯ ವರದ ಮೇಲೆ ನಮ್ಮ ಮನಸ್ಸನ್ನು ಇಡುವುದು ಆತನ ಸ್ವರೂಪಕ್ಕೆ ನಮ್ಮನ್ನು ದಿನದಿನವೂ ಬದಲಾಯಿಸುವುದು, ಕೃಪೆಯ ಆತನ ರಾಜ್ಯದಲ್ಲಿ ಪ್ರೀತಿಯ ಕಾರ್ಯಗಳನ್ನು ಮಾಡಲು ನಮ್ಮನ್ನು ನಡಿಸುವುದು.

## ಮುಕ್ತಾಯ

ದೇವರ ನಕ್ಷೆಯಿಂದ, ಸಭೆ ಮತ್ತು ಶಿಲುಬೆ ಎರಡೂ ಒಂದಾಗಿ ಬಂಧಿಸಲ್ಪಟ್ಟಿವೆ. ಶಿಲುಬೆಯಿಂದ ಸಭೆಯು ಸೃಷ್ಟಿಸ್ಪಟ್ಟಿದೆ, ಶುದ್ಧೀಕರಿಸಲ್ಪಟ್ಟಿದೆ ಮತ್ತು ಒತ್ತಾಯಿಸಲ್ಪಟ್ಟಿದೆ.

ಯೇಸು ಶಿಲುಬೆಯ ಮೇಲೆ ಶ್ರಮೆತಾಳುತ್ತಿದ್ದಾಗ, ಆತನ ಕಡೆಗೆ ಕೆಳಗಿದ್ದ ಕ್ರಮವಿಲ್ಲದ ಜನರ ಗುಂಪು ಎರಡು ಅಪಹಾಸ್ಯದ ಪ್ರಶ್ನೆಗಳು "ಆತನು ತನ್ನನ್ನು ಯಾಕೆ ರಕ್ಷಿಸಿಕೊಳ್ಳ ಬಾರದು?" ಮತ್ತು "ದೇವರು ಆತನನ್ನು ಯಾಕೆ ರಕ್ಷಿಸಬಾರದು?" (ಮತ್ತಾಯ 27:39-43). ಜನಸಮೂಹವು ದೇವರ ನಿಯೋಗದ ಅಸ್ತಿವಾರವನ್ನೇ ಹೊಡೆಯುತ್ತಿದ್ದೇ ವೆಂದು ಅರ್ಥಮಾಡಿಕೊಳ್ಳಲಿಲ್ಲ. ದೇವರು ಯೇಸುವನ್ನು ಶಿಲುಬೆಯ ಮೇಲಿನ ಆತನ ಮರಣದಿಂದ ಬಿಡುಗಡೆ ಮಾಡಿದ್ದರೆ, ಇಲ್ಲವೇ ಯೇಸುವು ತನ್ನನ್ನು ತಾನೇ ರಕ್ಷಿಸಿಕೊಂಡಿದ್ದರೆ, ಸಭೆಯು ಜೀವಿಸುವುದಕ್ಕಾಗಿ ಅಸಾಧ್ಯವಾಗುತ್ತಿತ್ತು; ಯಾಕಂದರೆ ಸಭೆಯು ಶಿಲುಬೆಯಿಂದ ತಮ್ಮ ಹಿಂದಿನ ಪಾಪಗಳ ಕ್ಷಮಾಪಣೆ ಹೊಂದಿದ ಮತ್ತು ಅನುದಿನವೂ ತೊಳೆಯಲ್ಪಟ್ಟ ಹಾಗೂ ಶಿಲುಬೆಯಿಂದ ಶುದ್ಧೀಕರಿಸಲ್ಪಟ್ಟ ಜನರಿಂದ ರಚಿಸಲ್ಪಟ್ಟಿರುತ್ತದೆ ಇದಲ್ಲದೇ, ಶಿಲುಬೆಯಿಲ್ಲದೇ ಸಭೆಯು ಅದರ ಅನುದಿನದ ಜೀವಿತ ದಲ್ಲಿ ಆಂತರಿಕ ಒತ್ತಡವಿಲ್ಲದೇ ಇರುವುದು, ಯಾಕಂದರೆ ಸಭೆಯು ದೇವರ ಜನಾಂಗ ವಾಗಿರಲು ಹಾಗೂ ದೇವರ ಮಾರ್ಗದಲ್ಲಿ ದೇವರ ಕಾರ್ಯಮಾಡಲು ಶಿಲುಬೆಯಿಂದ ಒತ್ತಾಯಿಸಲ್ಪಡುತ್ತದೆ.

ನೀನು ಸಭೆಯ ಹೊರಗೆ ಇದ್ದರೆ, ಅದರಲ್ಲಿ ಪ್ರವೇಶಿಸಲು ಅವಸರಪಡು, ಯಾಕಂದರೆ ಸಭೆಯನ್ನು ಪ್ರವೇಶಿಸುವದರಲ್ಲಿ, ನೀನು ಶಿಲುಬೆಯ ಎಲ್ಲಾ ಲಾಭಗಳನ್ನು ಸ್ವೀಕರಿಸಿಕೊಳ್ಳುವಿ. ಸಭೆಯು ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟ ಮತ್ತು ದೇವರ ಮಕ್ಕಳಂತೆ ಜೀವಿಸುತ್ತಿರುವ ಜನರ ದೇಹಕ್ಕಿಂತ ಹೆಚ್ಚಾದದ್ದಾಗಿರುವದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯು ಈ ಜಗತ್ತಿನಲ್ಲಿ ದೇವರ ಉದಾರ ದಾನಗಳಿಂದ ಸುತ್ತುವರಿಯಲ್ಪಟ್ಟಿದ್ದಾನೆ. ಆತನು ನಮಗೆ ಉಸಿರಾಡಿಸಲು ಗಾಳಿಯನ್ನು, ನಮಗೆ ಕುಡಿಯಲು ನೀರನ್ನು ಜೀವಿಸುವದಕ್ಕೆ ನೆಲವನ್ನು, ಆನಂದಿಸಲಿಕ್ಕೆ ಕುಟುಂಬ ಸಂಬಂಧಗಳನ್ನು ಮತ್ತು ಅಗಣಿತ ಇತರ ಲಾಭಗಳನ್ನು ಒದಗಿಸುತ್ತಾನೆ. ದೇವರ ಎಲ್ಲಾ ದಯೆಗಳನ್ನು ಹೆಸರಿಡುವುದು ಯಾರಿಗೂ ಸಾಧ್ಯವಿಲ್ಲ, ಸಂಶಯವಿಲ್ಲದೇ, ಆತನ ಕೃಪೆಯ ಅದ್ವಿತೀಯ ವ್ಯಕ್ತಪಡಿಸುವಿಕೆಯು ಕ್ರಿಸ್ತನ ಮುಖಾಂತರ ಆತನು ನಮಗೆ ಕೊಡುವ ರಕ್ಷಣೆಯಾಗಿರುತ್ತದೆ. ಅದು ದೇವರ ಅತೀದೊಡ್ಡ ಕ್ರೆಯವನ್ನು ಒಳಗೊಂಡರುತ್ತದೆ, ಮತ್ತು ಅದನ್ನು ಸ್ವೀಕರಿಸುವ ಪಾಪಿಗಳಿಗಾಗಿ ಅದು ಅತಿದೊಡ್ಡ ಲಾಭಗಳನ್ನು ಕೊಡುತ್ತದೆ,

ಅನೇಕರು ತಮಗೆ ಆತನು ಕೊಟ್ಟ ಪ್ರಾಪಂಚಿಕ ಆಶೀರ್ವಾದಗಳಲ್ಲಿ ದೇವರ

ಕೃಪಾಪೂರ್ಣವಾದ ಹಸ್ತವನ್ನು ನೋಡಿದ್ದಾರೆ, ಆದರೆ ಆತನ ಅಂತಿಮವಾದ, ಅರ್ಹತೆಗೊಳಗಾಗದ ದಯೆಯನ್ನು ಅಂದರೆ ರಕ್ಷಣೆಯನ್ನು ಹೊಂದಿಕೊಂಡಿರುವದಿಲ್ಲ. ಇದು ನಿನ್ನ ಬಗ್ಗೆ ಸತ್ಯವಾಗಿದೆಯೋ? ಕ್ರಿಸ್ತನಲ್ಲಿ ನಂಬಿಕೆ (ರೋಮಾಪುರ 10:10), ಪಾಪದ ಮಾನಸಾಂತರ (ಅಪೊಸ್ತಲರ ಕೃತ್ಯಗಳು 11:18), ಕ್ರಿಸ್ತನನ್ನು ದೇವರ ಕುಮಾರನಂತೆ ಅರಿಕೆಯ (ರೋಮಾಪುರ 10:10), ಮತ್ತು ಕ್ರಿಸ್ತನಲ್ಲಿ ಬಾಪ್ತಿಸ್ಮದ (ಗಲಾತ್ಯ 3:27) ಮುಖಾಂತರ, ನೀವು ಕ್ರಿಸ್ತನ ದೇಹವನ್ನು (1 ಕೊರಿಂಥ 12:13), ಕೃಪೆಯ ವಾತಾವರಣವನ್ನು ಪ್ರವೇಶಿಸಬಹುದು, ಮತ್ತು ಆತನ ನಿತ್ಯ ಜೀವವನ್ನು ಹೊಂದಿಕೊಳ್ಳ ಬಹುದು. "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆ ವೆಂದು ನಿಮಗೆ ತಿಳಿಯದೋ?" (ರೋಮಾಪುರ 6:3); "ಈತನು ನಮಗೋ ಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ. ಆತನು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸುವದರ ಮೂಲಕ ವಿಶೇಷವಾದ ಜ್ಞಾನವನ್ನೂ ಬುದ್ಧಿಯನ್ನೂ ಕೊಟ್ಟು ಆ ಕೃಪೆಯನ್ನು ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ" (ಎಫೆಸ 1:7, 8) ಎಂದು ಪೌಲನು ಹೇಳಿದ್ದಾನೆ.

ಯೇಸುವು, ತನ್ನ ಶಿಲುಬೆಯ ಮುಖಾಂತರ, ನಿನ್ನನ್ನು ಕ್ಷಮಾಪಣೆಗೆ ಮತ್ತು ಆತನ ದೇಹವನ್ನು ಸಭೆಯನ್ನು ಸೃಷ್ಟಿಸುವ ಜೀವನಕ್ಕೆ ನಿಮ್ಮನ್ನು ಅಮಂತ್ರಿಸುತ್ತಾನೆ. ನೀನು ಆತನ ಅಮಂತ್ರಣವನ್ನು ಸ್ವೀಕರಸುವಿಯೋ?

ಟಿಪ್ಪಣೆಗಳು

[1]Henry C. Thiessen, *Lectures in Systematic Theology* (Grand Rapids, Mich.: Wm. B. Eerdmans Publishing Co., 1949), 313. [2]R. A. Torrey, *What the Bible Teaches* (New York: Fleming H. Revell Co., 1898), 144.

© 2009 Truth for Today